# ನಲಿಕಲಿ

## ನಲಿ ಕಲಿ ತರಗತಿ ಮತ್ತು ಕಲಿಕಾ ಪ್ರಕ್ರಿಯೆ–2021-22

**ತಮಗೆಲ್ಲರಿಗೂ ಆತ್ಮೀಯ ಸ್ವಾಗತ.**

# ನಲಿ ಕಲಿ ತರಗತಿ ಮತ್ತು ಕಲಿಕಾ ಪ್ರಕ್ರಿಯೆ–2021-22

- 1ರಿಂದ3ನೇ ತರಗತಿಗಳಿಗೆ (ನಲಿಕಲಿ) ಸಂಬಂಧಿಸಿದಂತೆ 2021–22ನೇ ಸಾಲಿನಲ್ಲಿ ಈ ಕೆಳಗಿನಂತೆ ಕ್ರಮ ಕೈಗೊಳ್ಳುವುದು.
- ಪ್ರತಿ ದಿನ 80 ನಿಮಿಷಗಳ ಅವಧಿಯಂತೆ ಈ ಕಲಿಕಾ ಪ್ರಕ್ರಿಯೆ ನಡೆಯುತ್ತದೆ.
- ಪ್ರಸಕ್ತ ಶೈಕ್ಷಣಿಕ ಸಾಲಿಗೆ ಸೀಮಿತಗೊಂಡಂತೆ ಒಂದೇ ಕೊಠಡಿಯಲ್ಲಿ 1 ಮತ್ತು 2ನೇ ತರಗತಿಗಳನ್ನು ಒಂದು ಗುಂಪಾಗಿ ಹಾಗೂ 3ನೇ ತರಗತಿಯನ್ನು ಇನ್ನೊಂದು ಗುಂಪಾಗಿ ಪರಿಗಣಿಸುವುದು.
- 80 ನಿಮಿಷಗಳಲ್ಲಿ ಮೊದಲ 40 ನಿಮಿಷ 1 ಮತ್ತು 2ನೇ ತರಗತಿಗಳಿಗೂ ನಂತರದ 40 ನಿಮಿಷಗಳನ್ನು 3ನೇ ತರಗತಿಯ ಶಿಕ್ಷಕರ ಸಂಪೂರ್ಣ ಸಹಾಯದ (ಕಲಿಕಾಂಶ ಚಟುವಟಿಕೆಗಳಿಗೆ) ಕಲಿಕೆಗೆ ಮೀಸಲಿರಿಸಿಕೊಳ್ಳುವುದು.
- 1 ಮತ್ತು 2ನೇ ತರಗತಿಗೆ ಕಲಿಕಾಂಶ ಚಟುವಟಿಕೆ ನಡೆಯುವಾಗ 3ನೇ ತರಗತಿಗೆ ಪುನರ್ಬಲನ ಮತ್ತು ಮೌಲ್ಯಮಾಪನ ಚಟುವಟಿಕೆಗಳು ನಡೆಯುವಂತೆ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು.
- ಕರೋನಾದ ಈ ವಿಶೇಷ ಸಂದರ್ಭದಲ್ಲಿ ಕಲಿಕಾಪ್ರಕ್ರಿಯೆಯನ್ನು ಕಲಿಕಾಂಶ, ಪುನರ್ಬಲನ ಮತ್ತು ಮೌಲ್ಯಮಾಪನ ಈ 3 ಗುಂಪುಗಳಲ್ಲಿ ಮಾತ್ರ ನಡೆಸಲು ತೀರ್ಮಾನಿಸಲಾಗಿದೆ.

# ನಲಿ ಕಲಿ ತರಗತಿ ಮತ್ತು ಕಲಿಕಾ ಪ್ರಕ್ರಿಯೆ : 2021-22

- ಪ್ರಸ್ತುತ ವರ್ಷದ ಕಲಿಕಾ ಪ್ರಕ್ರಿಯೆಯನ್ನು ನಡೆಸಲು ಅನುಕೂಲವಾಗುವಂತೆ ಕೆಲವು ಮೆಟ್ಟಿಲುಗಳನ್ನು ಸಮ್ಮಿಳಿತಗೊಳಿಸಿ ಪ್ರತ್ಯೇಕ ಕಲಿಕಾ ಏಣಿಯನ್ನು ನೀಡಲಾಗಿದೆ.
- ಸದರಿ ಏಣಿಯಲ್ಲಿ ಮಾಹೆವಾರು ಹಂಚಿಕೆಗಳನ್ನೂ ಸಹ ನೀಡಲಾಗಿದೆ. ಅದರಂತೆ ತರಗತಿ ಪ್ರಕ್ರಿಯೆಯನ್ನು ನಿರ್ವಹಿಸುವುದು.
- 1 ಮತ್ತು 2ನೇ ತರಗತಿಯ ಕನ್ನಡ ವಿಷಯದಲ್ಲಿ ಯಾವುದೇ ಕಲಿಕಾಂಶವನ್ನು ಕೈಬಿಟ್ಟಿರುವುದಿಲ್ಲ. ಆದರೆ ಕೆಲವು ಮೆಟ್ಟಿಲುಗಳನ್ನು ಸಮ್ಮಿಳಿತ ಗೊಳಿಸಲಾಗಿದೆ.
- 3ನೇ ತರಗತಿಯಲ್ಲಿ ಸಾಮರ್ಥ್ಯಗಳನ್ನು ಒಗ್ಗೂಡಿಸಿ ಕಲಿಸಲು ಅವಕಾಶವಿರುವುದರಿಂದ 2ನೇ ಮೈಲಿಗಲ್ಲಿನ ಲಗೋರಿ ಆಟ ಮತ್ತು 11ನೇ ಮೈಲಿಗಲ್ಲಿನ ಕಾಡಿನ ರಾಜನ ಆಯ್ಕೆ ಇವುಗಳನ್ನು ಸಮ್ಮಿಳಿತಗೊಳಿಸಿ 9 ಮೈಲಿಗಲ್ಲುಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ.

# ಈ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ನಲಿಕಲಿ ಕನ್ನಡದಲ್ಲಿ ಮಾಡಿಕೊಂಡಿರುವ ಬದಲಾವಣೆಗಳು

| ತರಗತಿ | ಮೆಟ್ಟಿಲು | | | ಮೈಲಿಗಲ್ಲು | |
|---|---|---|---|---|---|
| | ಹಿಂದೆ ಇದ್ದದ್ದು | ಈ ವರ್ಷಕ್ಕೆ | ವ್ಯತ್ಯಾಸ | ಹಿಂದೆ ಇದ್ದದ್ದು | ಈ ವರ್ಷಕ್ಕೆ |
| ಒಂದು | 295 | 200 | 95 | 17 | 17 |
| ಎರಡು | 225 | 141 | 84 | 18 | 18 |
| ಮೂರು | 165 | 88 | 77 | 11 | 09 |

# ನಲಿಕಲಿ ಗಣಿತ : 2021-22

- ಮಕ್ಕಳು ಆಯಾ ತರಗತಿಯ ಗಣಿತ ವಿಷಯದಲ್ಲಿ ಕಲಿಯಲೇ ಬೇಕಾದ ಅಗತ್ಯ ಮೆಟ್ಟಿಲುಗಳನ್ನು ಮಾಹೆವಾರು ನಿಗದಿಪಡಿಸಲಾಗಿದೆ
- ಪ್ರತಿ ದಿನ 80 ನಿಮಿಷ ಅವಧಿಯಲ್ಲಿ ಮಾಹೆವಾರು ನಿಗದಿ ಪಡಿಸಿದಂತೆ ಕಲಿಕಾ ಪ್ರಕ್ರಿಯೆ ನಡೆಸಬೇಕು.
- 1 ಮತ್ತು 2ನೇ ತರಗತಿಯ ಕೆಲವು ಕಲಿಕಾಂಶಗಳನ್ನು ಮುಂದಿನ ತರಗತಿಯಲ್ಲಿನ ಪರಿಕಲ್ಪನೆಗಳೊಂದಿಗೆ ಸಮನ್ವಯಗೊಳಿಸಿ, ಕಡ್ಡಾಯವಾಗಿ ಅರ್ಥೈಸುವುದು.

ಉದಾ:

- 1ನೇ ತರಗತಿಯಲ್ಲಿ ಮಿಶ್ರಕ್ರಿಯೆ, ದತ್ತಾಂಶಗಳು, ಸಮಮಿತಿ & ವಿನ್ಯಾಸಗಳು
- 2ನೇ ತರಗತಿಯಲ್ಲಿ ದತ್ತಾಂಶಗಳು & ಸಮಮಿತಿ ವಿನ್ಯಾಸಗಳು
- 3ನೇ ತರಗತಿಯಲ್ಲಿ ಯಾವುದೇ ಕಲಿಕಾಂಶ ಬಿಟ್ಟಿಲ್ಲ.

# ಈ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ನಲಿಕಲಿ ಗಣಿತದಲ್ಲಿ ಮಾಡಿಕೊಂಡಿರುವ ಬದಲಾವಣೆಗಳು

| ತರಗತಿ | ಮೆಟ್ಟಿಲು | | | ಮೈಲಿಗಲ್ಲು | |
|---|---|---|---|---|---|
| | ಹಿಂದೆ ಇದ್ದದ್ದು | ಈ ವರ್ಷಕ್ಕೆ | ವ್ಯತ್ಯಾಸ | ಹಿಂದೆ ಇದ್ದದ್ದು | ಈ ವರ್ಷಕ್ಕೆ |
| ಒಂದು | 220 | 165 | 55 | 20 | 17 |
| ಎರಡು | 250 | 184 | 66 | 18 | 16 |
| ಮೂರು | 250 | 198 | 52 | 19 | 19 |

# ನಲಿ ಕಲಿ ಪರಿಸರ ಅಧ್ಯಯನ : 2021-22

- ಪರಿಸರ ಅಧ್ಯಯನದಲ್ಲಿ ನಿಗದಿಪಡಿಸಿರುವ ಎಲ್ಲಾ ಪತ್ಯ/ ಘಟಕಾಂಶಗಳನ್ನು ಉಳಿಸಿಕೊಳ್ಳಲಾಗಿದೆ.
- ಕಲಿಯಲೇಬೇಕಾದ ಸಹಸಂಬಂಧ ಇರುವ, ಅಗತ್ಯ ಕಲಿಕಾಂಶಗಳನ್ನು ಗುರುತಿಸಿ, ಮೈಲಿಗಲ್ಲುವಾರು/ ಮಾಹೆವಾರು ಹಂಚಿಕೆ ಮಾಡಲಾಗಿದೆ.
- ಕೆಲವು ಚಟುವಟಿಕೆಗಳನ್ನು ಮಕ್ಕಳು ಮನೆಯಲ್ಲಿ ನಿರ್ವಹಿಸಲು ಅವಕಾಶ ಕಲ್ಪಿಸಿದೆ.

# ಈ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ನಲಿಕಲಿ ಪ.ಅ.ದಲ್ಲಿ ಮಾಡಿಕೊಂಡಿರುವ ಬದಲಾವಣೆಗಳು

| ತರಗತಿ | ಮೆಟ್ಟಿಲು | | | ಮೈಲಿಗಲ್ಲು | |
|---|---|---|---|---|---|
| | ಹಿಂದೆ ಇದ್ದದ್ದು | ಈ ವರ್ಷಕ್ಕೆ | ವ್ಯತ್ಯಾಸ | ಹಿಂದೆ ಇದ್ದದ್ದು | ಈ ವರ್ಷಕ್ಕೆ |
| ಒಂದು | 110 | 109 | 01 | 12 | 12 |
| ಎರಡು | 115 | 80 | 35 | 15 | 15 |
| ಮೂರು | 127 | 127 | 00 | 13 | 13 |

# ನಲಿಕಲಿ ಅಭ್ಯಾಸ ಪುಸ್ತಕಗಳ ಬಳಕೆ : 2021–22

- ಈಗಾಗಲೇ ಕೆಟಿಬಿಎಸ್ ನಿಂದ ಸರಬರಾಜಾಗಿರುವ ನಾಲ್ಕೂ ವಿಷಯಗಳ ಅಭ್ಯಾಸ ಪುಸ್ತಕಗಳನ್ನು ಮಕ್ಕಳು ಪರಿಷ್ಕೃತ ಕಲಿಕಾ ಏಣಿಯನ್ನು ಅನುಸರಿಸಿ ಬಳಸಲು ಅವಕಾಶ ಮಾಡಿಕೊಡುವುದು.
- ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಮಕ್ಕಳಿಗೆ ಮನೆಗೆಲಸವಾಗಿಯೂ, ಸ್ವಕಲಿಕಾ ಚಟುವಟಿಕೆಗಳಾಗಿಯೂ ನೀಡಬಹುದು.
- ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಎಲ್ಲ ಮಕ್ಕಳೂ ಮಾಡುವಂತೆ ಗಮನಹರಿಸುವುದು ಮತ್ತು ಪರಿಶೀಲಿಸಿ ಹಿಮ್ಮಾಹಿತಿ ನೀಡುವುದು.

# ನಲಿಕಲಿ ಪ್ರಗತಿನೋಟ ಭರ್ತಿಮಾಡುವಿಕೆ–2021–22

- ಈಗಾಗಲೇ ಕೆಟಿಬಿಎಸ್ ನಿಂದ ಪ್ರಗತಿ ನೋಟಗಳು ಶಾಲೆಗಳನ್ನು ತಲುಪಿವೆ. ಅವುಗಳನ್ನೇ ಈ ವರ್ಷಕ್ಕೂ ಬಳಸುವುದು.
- ಸುತ್ತೋಲೆ ಜೊತೆ ನಿಡಿರುವ ಕಲಿಕಾ ಏಣಿಯನ್ನು ಆಧರಿಸಿ ಪ್ರಗತಿ ನೋಟದಲ್ಲಿ ಕೈ ಬಿಟ್ಟಿರುವ ಮೆಟ್ಟಿಲುಗಳನ್ನು ಮೊದಲೇ ಶೇಡ್ ಮಾಡಿಕೊಳ್ಳುವುದು.
- ಉಳಿದಂತೆ ಮಕ್ಕಳು ಪೂರ್ಣಗೊಳಿಸಿದ ನಂತರ ಪ್ರಗತಿ ನೋಟದಲ್ಲಿ ✓ ಗುರುತನ್ನು ಹಾಕುವುದು.
- ಕಲಿಕಾ ಏಣಿಯಲ್ಲಿ ನೀಡಿರುವ ಮಾಹೆವಾರು ಹಂಚಿಕೆಯನ್ನು ಇಲ್ಲಿಗೂ ಅನ್ವಯಿಸಿಕೊಳ್ಳುವುದು.
- ಪ್ರಗತಿ ನೋಟದಲ್ಲಿಯೇ ದಿನಾಂಕವನ್ನು ಗುರುತಿಸಿಕೊಂಡಲ್ಲಿ ಪ್ರತ್ಯೇಕ ದಿನಚರಿಯ ಅವಶ್ಯಕತೆ ಇರುವುದಿಲ್ಲ.

# ನಲಿ ಕಲಿ ತರಗತಿ ಮತ್ತು ಮೌಲ್ಯಮಾಪನ:2021-22

- ಈಗಾಗಲೇ ದಿನಾಂಕ: 30.08.2021ರ ಸುತ್ತೋಲೆಯಲ್ಲಿ ತಿಳಿಸಿದಂತೆ ಸೆಪ್ಟಂಬರ್, ನವೆಂಬರ್, ಡಿಸೆಂಬರ್, ಫೆಬ್ರವರಿ ತಿಂಗಳುಗಳ ಕೊನೆಯಲ್ಲಿ FAಗಳನ್ನು (ರೂಪಣಾತ್ಮಕ ಮೌಲ್ಯಮಾಪನ) ನಡೆಸುವುದು.
- ಹಾಗೆಯೇ ಈ ಶೈಕ್ಷಣಿಕ ಸಾಲಿನಲ್ಲಿ ನಡೆಸಬೇಕಿರುವ ಒಂದು SA ಅನ್ನು ಏಪ್ರಿಲ್–22ರಲ್ಲಿ ನಡೆಸುವುದು.
- FA ಮತ್ತು SAಗಳಿಗೆ ಪ್ರತ್ಯೇಕ ಚಟುವಟಿಕೆಗಳನ್ನು ನಡೆಸದೆ (ನಲಿಕಲಿಯಲ್ಲಿ ಮೌಲ್ಯಮಾಪನ ನಿರಂತರವಾಗಿ ನಡೆಯುವುದರಿಂದ) ಈಗಾಗಲೇ ಸದರಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಮಕ್ಕಳ ಮೆಟ್ಟಿಲುವಾರು ಕಲಿಕೆಯ ಶೇಕಡಾವನ್ನು ಕಂಡುಹಿಡಿದು ಅದನ್ನು ಶ್ರೇಣಿಗಳಿಗೆ ಪರಿವರ್ತಿಸಿ ವೈಯಕ್ತಿಕ ಪ್ರಗತಿ ದಾಖಲೆ ಹಾಗೂ SATS ನಲ್ಲಿ ದಾಖಲಿಸುವುದು.

# ನಲಿಕಲಿಯಲ್ಲಿ ನಿರ್ವಹಿಸಬೇಕಾದ ದಾಖಲೆಗಳು

1) ಇಲಾಖೆಯಿಂದ ನೀಡಿರುವ ಕಲಿಕಾ ಏಣಿ
2) ಇಲಾಖೆಯಿಂದ ಸರಬರಾಜು ಮಾಡಿರುವ ಪ್ರಗತಿ ನೋಟ
3) ಶಿಕ್ಷಕರ ವೈಯಕ್ತಿಕ ಪ್ರಗತಿ ವಹಿ
4) ಕ್ರೋಢೀಕೃತ ಪ್ರಗತಿಯ ವಹಿ




# ವಂದನೆಗಳು